| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1374/2019**

ಸಾಕ್ಷಿದಾರನ ಹೆಸರು ಃ ಸತೀಶ್ ಪಿ.ಡಬ್ಲ್ಯೂಃ 2

ತಂದೆಯ ಹೆಸರುಃ ದಿಃ ಮಂಜುನಾಥ ನಾಯಕ್ ಸಿ.ಡಬ್ಲ್ಯೂಃ 4

ಪ್ರಾಯ ಃ 48 ವರ್ಷ

ಉದ್ಯೋಗ ಃ ಮುಖ್ಯ ಪೇದೆ, ಕುಂದಾಪುರ

ವಾಸ ಃ ಕುಂದಾಪುರ

ದಿನಾಂಕ 07-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು 2016 ರಿಂದ 2019 ರವರೆಗೆ ಕಾರ್ಕಳ ನಗರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23-02-2019 ರಂದು ಚಾಸಾ-1 ರವರು ತಮಗೆ ಮಾನ್ಯ ಸಹಾಯಕ ಪೋಲಿಸ್ ಅಧಿಕ್ಷಕರು, ಕಾರ್ಕಳ ರವರು ಹಳೇ ಉಡುಪಿ ಬಸ್ಸು ನಿಲ್ದಾಣದ ಬಳಿ ಇರುವ ಕಾರ್ಲಾ ಕಾಂಪ್ಲೆಕ್ಸ ಕಟ್ಟಡದಲ್ಲಿರುವ ವಿಜಯ ವೈನ್ ಶಾಪ್ ಬಳಿ ಇರುವ ಹೋಟೆಲ್ ನಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಮದ್ಯವನ್ನು ದಾಸ್ತಾನು ಇರಿಸಿ ಹೋಟೆಲಿಗೆ ಬರುವ ಗ್ರಾಹಕರಿಗೆ ಅಕ್ರಮವಾಗಿ ಮದ್ಯವನ್ನು ಸರಬರಾಜು ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ತಿಳಿಸಿದ್ದು ಅವರಿಗೆ ತಕ್ಷೀರು ಸ್ಥಳಕ್ಕೆ ದಾಳಿ ಮಾಡಿ ಪ್ರಕರಣ ದಾಖಲಿಸುವಂತೆ ಮೌಖಿಕವಾಗಿ ಸೂಚನೆ ನೀಡಿರುವುದಾಗಿ ತಿಳಿಸಿರುತ್ತಾರೆ. ನಂತರ ಸದರಿ ಮಾಹಿತಿಯ ಆಧಾರದ ಮೇರೆಗೆ ಅದೇ ದಿನ ಸಂಜೆ 4.00 ಗಂಟೆಗೆ ಮಾಹಿತಿ ಖಚಿತ ಪಡಿಸಿಕೊಂಡು ಚಾಸಾ 1 ರವರೊಂದಿಗೆ ನಾನು ಹಾಗೂ ಚಾಸಾ-2 ಮತ್ತು 3 ರವರು ಇಲಾಖಾ ವಾಹನ ಸಂಖ್ಯೆ ಕೆಎ-20-ಜಿ-0276 ರಲ್ಲಿ ಹೊರಟು ಕಾರ್ಕಳ ಪೇಟೆಗೆ ತಲುಪಿ ಚಾಸಾ 5 ಮತ್ತು 6 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ದಾಳಿಯ ವಿಚಾರ ತಿಳಿಸಿ ದಾಳಿ ಸಮಯ ಪಂಚರಾಗಿ ಹಾಜರಿರುವಂತೆ ವಿನಂತಿಸಿಕೊಂಡಿದ್ದು ಅವರು ಒಪ್ಪಿಕೊಂಡಿರುತ್ತಾರೆ.

ಅದರಂತೆ ಅವರುಗಳನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಕಾರ್ಕಳ ಪೇಟೆ ಕಸಬಾ ಗ್ರಾಮದ ಹಳೇ ಉಡುಪಿ ಬಸ್ಸು ನಿಲ್ದಾಣ ತಲುಪಿ ಕಾರ್ಲಾ ಕಾಂಪ್ಲೆಕ್ಸ್ ಕಟ್ಟಡದಲ್ಲಿರುವ ವಿಜಯ ವೈನ್ಸ ಶಾಪ್ ಪಕ್ಕದಲ್ಲಿ ಇರುವ ಹೋಟೆಲ್ ಬಳಿಗೆ 4.30 ಗಂಟೆಗೆ ತೆರಳಿ ಚಾಸಾ 2 ರಿಂದ 6 ರವರ ಜೊತೆ ಹೋಟೆಲ್ ಗೆ ಪ್ರವೇಶಿಸಿದ್ದು ಅಲ್ಲಿ ಗ್ರಾಹಕರಿಗೆ ಮದ್ಯ ಸರಬರಾಜು ಮಾಡುತ್ತಿರುವುದು ಕಂಡು ಬಂದಿರುತ್ತದೆ. ಅಲ್ಲದೇ ಕೇಲವು ಗ್ರಾಹಕರು ಹೋಟೆಲ್ ಒಳಗಡೆ ಮದ್ಯ ಸೇವಿಸುತ್ತಿದ್ದು ನನಗೆ ದೊರೆತಿರುವ ಮಾಹಿತಿ ದೃಡಪಟ್ಟ ಮೇರೆಗೆ ಹೋಟೆಲ್ ನ ಕ್ಯಾಶ್ ಕೌಟರ್ ಬಳಿ ನೆಲದ ಮೇಲೆ ಹಾಗೂ ಟೇಬಲ್ ಮೇಲೆ ಮದ್ಯ ತುಂಬಿದ ಬಾಟಲಿಗಳನ್ನು ಇಟ್ಟಿರುವುದು ಕಂಡು ಬಂದಿರುತ್ತದೆ. ನಂತರ ಕೌಂಟರ್ ನಲ್ಲಿರುವ ಸಿಬ್ಬಂದಿಯಲ್ಲಿ ವಿಚಾರಿಸಲಾಗಿ ತನ್ನ ಹೆಸರು ಹರೀಶ್ ಶೆಟ್ಟಿ, ವಯಸ್ಸು 40, ತಂದೆಃ ಮಹಾಬಲ ಶೆಟ್ಟಿ, ವಾಸಃ ಮಂಜುಗೋಲಿ, ಕೆಳಗಿನ ಮನೆ, ಬೋರ್ಕಟ್ಟೆ ಅಂಚೆ, ಮಿಯ್ಯಾರು, ಕಾರ್ಕಳ ಎಂಬುದಾಗಿ ತಿಳಿಸಿದ್ದು ತನ್ನ ಹೋಟೆಲ್ ಮಾಲೀಕರಾದ ವಿಠಲರಾಯ ಹೆಗ್ಡೆ ಹೋಟೆಲ್ ಗೆ ಬರುವ ಗ್ರಾಹಕರಿಗೆ ಮದ್ಯವನ್ನು ಸರಬರಾಜು ಮಾಡಿ ಮಾರಾಟ ಮಾಡಲು ತಂದಿರಿಸಿರುವುದಾಗಿ ಹಾಗೂ ಮದ್ಯದ ಬಾಟಲಿಗಳನ್ನು ಶೇಖರಿಸಿಡಲು ತಮ್ಮ ಬಳಿ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ಆತನ ತಪ್ಪನ್ನು ಚಾಸಾ-1 ರವರು ಮನವರಿಕೆ ಮಾಡಿ ಪಂಚರ ಸಮಕ್ಷಮದಲ್ಲಿ ಮದ್ಯದ ಬಾಟಲಿಗಳನ್ನು ಪರಿಶೀಲಿಸಿರುತ್ತಾರೆ. ಅವುಗಳು ಸ್ವದೇಶಿ ನಿರ್ಮಿತವಾಗಿರುವ ಮದ್ಯದ ಬಾಟಲಿಗಳಾಗಿದ್ದು ಅವುಗಳ ವಿವರ ಈ ಕೆಳಗಿನಂತಿದೆ

ಮೈಸೂರು ಲ್ಯಾನ್ಸರ್ ವಿಸ್ಕಿ ಎಂದು ಬರೆದಿರುವ 90 ಎಮ್ ಎಲ್ ಸಾಮರ್ಥ್ಯ ದ ಮದ್ಯ ತುಂಬಿದ 19 ಟೆಟ್ರಾ ಪ್ಯಾಕೆಟ್ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 570/-, ಪ್ರಟಿಜ್ ಫೈನ್ ವಿಸ್ಕಿ ಎಂದು ಬರೆದಿರುವ 90 ಎಮ್ ಎಲ್ ಸಾಮರ್ಥ್ಯ ದ ಮದ್ಯ ತುಂಬಿದ 6 ಟೆಟ್ರಾ ಪ್ಯಾಕೆಟ್ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 180/-,

ವಿನಸರ್ ಡಿಲೆಕ್ಸ ವಿಸ್ಕಿ ಎಂದು ಬರೆದಿರುವ 90 ಎಮ್ ಎಲ್ ಸಾಮರ್ಥ್ಯ ದ ಮದ್ಯ ತುಂಬಿದ 3 ಟೆಟ್ರಾ ಪ್ಯಾಕೆಟ್ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 90/-,

ಓರಿಜಿನಲ್ ಚಾಯ್ಸು ವಿಸ್ಕಿ ಎಂಬ ಹೆಸರಿನ 90 ಎಮ್ ಎಲ್ ನ ಮದ್ಯ ತುಂಬಿದ 6 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 180/-

ಓರಿಜಿನಲ್ ಚಾಯ್ಸು ಡಿಲೆಕ್ಸ ವಿಸ್ಕಿ ಎಂಬ ಹೆಸರಿನ 90 ಎಮ್ ಎಲ್ ನ ಮದ್ಯ ತುಂಬಿದ 12 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 360/-

ಎಮ್ ಸಿ ಡೋವಲ್ಸ್ ಪ್ರಿಮಿಯರ್ ವಿಸ್ಕಿ ಎಂಬ ಹೆಸರಿನ 90 ಎಮ್ ಎಲ್ ನ ಮಧ್ಯ ತುಂಬಿದ 3 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 201/-

ಹೆವಾರ್ಡ್ಸ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 3 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 180/-

8 ಪಿ ಎಮ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 3 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 225/-

ಓಲ್ಡ್ ಟ್ವಾರಾನ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 2 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 150/-

ಬಾಗ್ಪೇಪರ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 3 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 270/-

ಓರಿಜಿನಲ್ ಚಾಯ್ಸು ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 6 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 360/-

ವಿಡ್ಸರ್ ವಿಸ್ಕಿಯ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 5 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 300/-

ಎಮ್ ಸಿ ಡೋವಲ್ಸ್ ಪ್ರಿಮಿಯರ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 2 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 320/-

ಮೈಸೂರು ಲಾಯನ್ಸರ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 12 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 720/-

ಇಂಪಿರಿಯಲ್ ಬ್ಲೂ ವಿಸ್ಕಿ ಎಂಬ ಹೆಸರಿನ 90 ಎಮ್ ಎಲ್ ನ ಮಧ್ಯ ತುಂಬಿದ 3 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 480/-

ಪ್ರಟಿಜ್ ಫೈನ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 7 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 420/-

ಆಫೀಸರ್ ಚಾಯ್ಸು ಸ್ಟಾರ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 2 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 180/-

ಆಫೀಸರ್ ಚಾಯ್ಸು ಸ್ಪೇಷಲ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮಧ್ಯ ತುಂಬಿದ 8 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 720/-

ಬೆಂಗಳೂರು ಮಾಲ್ಟ್ ವಿಸ್ಕಿ ಎಂಬ ಹೆಸರಿನ 180 ಎಮ್ ಎಲ್ ನ ಮದ್ಯ ತುಂಬಿದ 4 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 200/-

ಹೆವಾರ್ಡ್ಸ್ ಚೆಸ್ ವಿಸ್ಕಿ ಎಂಬ ಹೆಸರಿನ 90 ಎಮ್ ಎಲ್ ನ ಮದ್ಯ ತುಂಬಿದ 2 ಟೆಟ್ರಾ ಪ್ಯಾಕೆಟ್ ಗಳು ಅವುಗಳ ಒಟ್ಟು ಮೌಲ್ಯ ಅಂದಾಜು 60/-

ಓರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಹೆಸರಿನ 750 ಎಮ್ ಎಲ್ ನ ಮದ್ಯ ತುಂಬಿದ 1 ಬಾಟಲಿ ಅವುಗಳ ಒಟ್ಟು ಮೌಲ್ಯ ಅಂದಾಜು 250/-

ಬಾಗ್ಪೈಪರ್ ವಿಸ್ಕಿ ಎಂಬ ಹೆಸರಿನ 750 ಎಮ್ ಎಲ್ ನ ಮದ್ಯ ತುಂಬಿದ 1 ಬಾಟಲಿ ಅವುಗಳ ಒಟ್ಟು ಮೌಲ್ಯ ಅಂದಾಜು 374/-

ಕೋಡೇಸ್ XXX ರಮ್ ಎಂಬ ಹೆಸರಿನ 375 ಎಮ್ ಎಲ್ ನ ಮದ್ಯ ತುಂಬಿದ 1 ಬಾಟಲಿ ಅವುಗಳ ಒಟ್ಟು ಮೌಲ್ಯ ಅಂದಾಜು 154/-

Black port super strong beer ಎಂಬ ಹೆಸರಿನ 650 ಎಮ್ ಎಲ್ ನ ಮದ್ಯ ತುಂಬಿದ 2 ಬಾಟಲಿ ಅವುಗಳ ಒಟ್ಟು ಮೌಲ್ಯ ಅಂದಾಜು 210/-

Carlsbad premium beer ಎಂಬ ಹೆಸರಿನ 650 ಎಮ್ ಎಲ್ ನ ಮದ್ಯ ತುಂಬಿದ 1 ಬಾಟಲಿ ಅವುಗಳ ಒಟ್ಟು ಮೌಲ್ಯ ಅಂದಾಜು 110/-

Windsor deluxe whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/4 ಮದ್ಯ ತುಂಬಿದ 1 ಬಾಟಲಿ

Khoda YS XXX Rum ಎಂಬ ಹೆಸರಿನ 375 ಎಮ್ ಎಲ್ ನ ಸುಮಾರು 1/4 ಮದ್ಯ ತುಂಬಿದ 1 ಬಾಟಲಿ

Old Tavren ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/4 ಮದ್ಯ ತುಂಬಿದ 1 ಬಾಟಲಿ

Bagpiper ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/4 ಮದ್ಯ ತುಂಬಿದ 1 ಬಾಟಲಿ

8 PM whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 3/4 ಮದ್ಯ ತುಂಬಿದ 1 ಬಾಟಲಿ

original choice dry gin ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/4 ಮದ್ಯ ತುಂಬಿದ 1 ಬಾಟಲಿ

Mysore lancer whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/2 ಮಧ್ಯ ತುಂಬಿದ 1 ಬಾಟಲಿ

original choice whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/2 ಮಧ್ಯ ತುಂಬಿದ 1 ಬಾಟಲಿ

Haywards whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 3/4 ಮಧ್ಯ ತುಂಬಿದ 1 ಬಾಟಲಿ

Prestige whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/2 ಮಧ್ಯ ತುಂಬಿದ 1 ಬಾಟಲಿ

Maqintosh whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/4 ಮಧ್ಯ ತುಂಬಿದ 1 ಬಾಟಲಿ

Officers choice whisky ಎಂಬ ಹೆಸರಿನ 750 ಎಮ್ ಎಲ್ ನ ಸುಮಾರು 1/4 ಮಧ್ಯ ತುಂಬಿದ 1 ಬಾಟಲಿ

Royal Stag ಎಂಬ ಹೆಸರಿನ 180 ಎಮ್ ಎಲ್ ನ ಸುಮಾರು 3/4 ಮಧ್ಯ ತುಂಬಿದ 1 ಬಾಟಲಿ

Impirial Blue ಎಂಬ ಹೆಸರಿನ 180 ಎಮ್ ಎಲ್ ನ ಸುಮಾರು 1/4 ಮಧ್ಯ ತುಂಬಿದ 1 ಬಾಟಲಿ

Jhon Bull ಎಂಬ ಹೆಸರಿನ 180 ಎಮ್ ಎಲ್ ನ ಸುಮಾರು 1/2 ಮಧ್ಯ ತುಂಬಿದ 1 ಬಾಟಲಿ

Muscovy vodka ಎಂಬ ಹೆಸರಿನ 180 ಎಮ್ ಎಲ್ ನ ಸುಮಾರು 1/4 ಮಧ್ಯ ತುಂಬಿದ 1 ಬಾಟಲಿ

MC dowlles ಎಂಬ ಹೆಸರಿನ 180 ಎಮ್ ಎಲ್ ನ ಸುಮಾರು 3/4 ಮಧ್ಯ ತುಂಬಿದ 1 ಬಾಟಲಿ

MC dowlles ಎಂಬ ಹೆಸರಿನ 180 ಎಮ್ ಎಲ್ ನ ಸುಮಾರು 1/4 ಮಧ್ಯ ತುಂಬಿದ 1 ಬಾಟಲಿ

Mysore Lancer ಎಂಬ ಹೆಸರಿನ 2 ಖಾಲಿ ಬಾಟಲಿ, Officer choice ಎಂಬ ಹೆಸರಿನ 2 ಖಾಲಿ ಬಾಟಲಿಗಳನ್ನು ಸಮಯ 4.30 ರಿಂದ 6.30 ರವರೆಗೆ ಪಂಚರ

ಸಮಕ್ಷಮ ಮಹಜರು ಮಾಡಿ ಸ್ವಾಧೀನಪಡಿಸಿಕೊಂಡು ಕ್ರಮವಾಗಿ ಅವುಗಳಿಗೆ 1 ರಿಂದ 139 ಎಂದು ಗುರುತುಗಳನ್ನು ನೀಡಿರುತ್ತೇವೆ. ಮೇಲಿನ ಎಲ್ಲಾ ಬಾಟಲಿಗಳನ್ನು ಮುಂದಿನ ಕ್ರಮದ ಬಗ್ಗೆ ಚಾಸಾ-1 ರವರು ಪಂಚರ ಸಮಕ್ಷಮ ಸ್ವಾಧೀನಪಡಿಸಿಕೊಂಡು ಬಿಳಿ ಬಟ್ಟೆಯಿಂದ ಸುತ್ತಿ ಎಸ್ ಹೆಚ್ ಓ ಅರಗು ಸೀಲು ಹಾಕಿ ಪಂಚರ ಸಹಿಯುಳ್ಳ ಚೀಟಿ ಅಂಟಿಸಿ ಮೇಲೆ ಹೇಳಿದಂತೆ ಗುರುತು ನೀಡಿರುತ್ತಾರೆ. ಈ ಎಲ್ಲಾ ಸ್ವತ್ತುಗಳ ಒಟ್ಟು ಮೌಲ್ಯ 7264/- ರೂ ಆಗಬಹುದು. ಗ್ರಾಹಕರಿಗೆ ಹೋಟೆಲ್ ನಲ್ಲಿ ಮದ್ಯ ಮಾರಾಟ ಮಾಡಿ ಬಂದ ಹಣ ರೂ 1050/- 100 ಮುಖ ಬೆಲೆಯ 8, 50 ಮುಖಬೆಲೆಯ 5 ನೋಟುಗಳು ತನ್ನ ಬಳಿ ಇರುವುದಾಗಿ ಹರೀಶ್ ಶೆಟ್ಟಿಯವರು ತಿಳಿಸಿದ್ದು ಅವರು ಹಾಜರುಪಡಿಸಿದ ಹಣವನ್ನು ಅಲ್ಲದೇ ಗ್ರಾಹಕರಿಗೆ ಮದ್ಯವನ್ನು ವಿತರಿಸಲು ಉಪಯೋಗಿಸಿದ 6 ಗಾಜಿನ ಗ್ಲಾಸ್ ಗಳನ್ನು ಮುಂದಿನ ಕ್ರಮದ ಬಗ್ಗೆ ಚಾಸಾ-1 ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ. ನಂತರ ಹರೀಶ್ ಶೆಟ್ಟಿಯನ್ನು ವಶಕ್ಕೆ ಪಡೆದು ದಸ್ತಗಿರಿ ಕ್ರಮ ಜರುಗಿಸಿ ಠಾಣೆಗೆ ಕರೆದುಕೊಂಡು ಹೋಗಿ ನಂತರ ಆರೋಪಿ ದಸ್ತಗಿರಿ ಮತ್ತು ಸ್ವತ್ತು ಸ್ವಾಧೀನತಾ ಮಹಜರ್ ನಡೆಸಿ, ಪಿರ್ಯಾದು ಪ್ರತಿಯನ್ನು ಚಾಸಾ 14 ರವರಿಗೆ ಮುಂದಿನ ಕ್ರಮಕ್ಕಾಗಿ ಚಾಸಾ-1 ರವರಿಗೆ ನೀಡಿರುತ್ತಾರೆ.

ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಸೊತ್ತುಗಳನ್ನು ನೋಡಿದರೆ ಗುರುತಸುತ್ತೇನೆ. ಸಾಕ್ಷಿಯು ನ್ಯಾಯಾಲಯ ಮುಂದಿರುವ ಮು.ಮಾ-1 ರಿಂದ 48 ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಬಿ ಎಮ್ ಎಸ್ ವಕೀಲರಿಂದಃ

ನಾವು ಭೇಟಿ ನೀಡಿದ್ದೇವೆ ಎಂದು ಹೇಳುವ ಸ್ಥಳ ಕಾರ್ಕಳದ ಉಡುಪಿ ಬಸ್ಸುಸ್ಟಾಡ್ ನ ಹತ್ತಿರ ಇರುವ ಕಾರ್ಕಳ ಕಂಪ್ಲೆಕ್ಸನ ವಾಣಿಜ್ಯ ಸಂಕೀರ್ಣದಲ್ಲಿ ಇದೆ. ಅಲ್ಲಿ ಸಾಕಷ್ಟು ವಾಣಿಜ್ಯ ಸಂಕೀರ್ಣದಲ್ಲಿ ಸಾಕಷ್ಟು ಅಂಗಡಿ ಮುಗಟ್ಟುಗಳು ಇದೆ. ಸದರಿ ವಾಣಿಜ್ಯ ಸಂಕೀರ್ಣದಲ್ಲಿ ಹೋಟೆಲ್ ಬಂಜಾರ ಬಾರ್ ಆ್ಯಂಡ್ ರೆಸ್ಟೋರೆಂಟ್, ಎಮ್ ಎಸ್ ಐ ಎಲ್ ರವರ ಸಗಟು ಮದ್ಯ ಮಾರಾಟದ ಮಳಿಗೆ

ಹಾಗೂ ವಿಠಲ ರಾಯ್ ಹೆಗ್ಡೆಯವರ ವಿಜಯ ವೈನ್ಸ ಎನ್ನುವ ಮಧ್ಯ ಮಾರಾಟದ ಮಳಿಗೆ ಇದೆ. ತಾವು ದಾಳಿ ಮಾಡಿದ್ದೇನೆ ಎಂದು ಹೇಳುವ ಸ್ಥಳದ ಎಡ ಬಲದ ಬದಿಗಳಲ್ಲಿ ದುರ್ಗಾ ರೆಸ್ಟೊರೆಂಟ್, ದೆಲ್ಲಿ ದಾರ್ಬರ್ ಹೋಟೆಲ್, ಕೊನಿಕ ಕಲ್ಲರ್, ಸುಶೀಲ್ ಹೇರ್ ಡ್ರಸಿಂಗ್ ಸಲೂನ್, ರಾಧಿಕ ಸೂಪರ್ ಸೇಲ್, ಪ್ರಭು ಸಿಲ್ಕ, ಮೇಗಾ ಸ್ಯಾರಿ ಸೆಂಟರ್ ಹಾಗೂ ಇನ್ನಿತರ ಸುಮಾರು ಅಂಗಡಿ ಮುಗಟುಗಳು ಇವೆ ಎಂದರೆ ಸರಿ. ಚಾಸಾ-1 ರವರು ದಾಳಿ ಮಾಡಿದ್ದೇವೆ ಎಂದು ಹೇಳುವ ಸಮಯದಲ್ಲಿ ಅಲ್ಲಿಯ ನೆರೆಕೆರೆಯವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾವು ನೆರೆಕರೆಯವರ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಹಾಗೂ ಸೊತ್ತುಗಳನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ನಮ್ಮ ಠಾಣೆಯ ಖಾಯಂ ಪಂಚ ಸಾಕ್ಷಿಗಳು ಎಂದರೆ ನನಗೆ ಗೊತ್ತಿಲ್ಲ. ದಾಳಿ ಮಾಡಿದ್ದೇವೆ ಎಂದು ಹೇಳುವ ಸಮಯದಲ್ಲಿ ಇದ್ದ ಗಿರಾಕಿಗಳನ್ನು ವಿಚಾರಿಸಿರುವುದಿಲ್ಲ. ದಾಳಿ ಮಾಡಿದ್ದೇವೆ ಎಂದು ಹೇಳುವ ಅಂಗಡಿಯ ಡೋರ್ ನಂಬರ್, ಆರ್ ಆರ್ ನಂಬರ್ ಅನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಆರೋಪಿತನು ಸದರಿ ವಾಣಿಜ್ಯ ಸಂಕೀರ್ಣದ ವಿಜಯ ವೈನ್ಸ್ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲು ಏನಾದರೂ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ಸ್ಥಳದಲ್ಲಿ ಸೊತ್ತುಪಟ್ಟಿ , ಶೋಧನಾ ವಾರೆಂಟ್ ತಯಾರಿಸಿದ ಬಗ್ಗೆ ಗೊತ್ತಿಲ್ಲ. ಚಾಸಾ 5 ರವರು ಕಾರ್ಕಳ ಕಾಂಪ್ಲೆಕ್ಸ್ ಯಿಂದ ಎರಡೂವರೆ ಕಿ ಮೀ ದೂರದವರು, ಚಾಸಾ 6 ರವರು 15 ಕಿ ಮೀ ದೂರದವರು ಎಂದರೆ ಸರಿ.

ಮು ಮಾ 1 ರಿಂದ 48 ಕ್ಕೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ವತಂತ್ರ ಸಾಕ್ಷಿದಾರರ ಸಮಕ್ಷಮ ಮು ಮಾಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ರಿಂದ 48 ಅನ್ನು ಆರೋಪಿಯ ವಶದಿಂದ ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾಳಿ ಮಾಡಿದ್ದೇವೆ ಎಂದು ಹೇಳುವ ಅಂಗಡಿಗೂ ಆರೋಪಿಗೂ ಸಂಬಂಧವಿಲ್ಲ

ಎಂದರೆ ಸರಿಯಲ್ಲ. ಇಲಾಖಾ ಅಂಖ್ಯೆಸಂಖ್ಯೆಗೊಸ್ಕರ ಆರೋಪಿಯ ವಿರುದ್ದ ಸುಳ್ಳು ಪಿರ್ಯಾದನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ

Learned APP filed memo praying to issue s/s to the CW 5 to 14. As the eye witness Pw 1 to 4 have completly turned hostile to the case of prosecution. No purpose will be served by issuance of summons to CW 5 to 14. Hence by rejecting the prayer of learned APP evidence of CW 5 to 14 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for Arguments.

Call on 14-07-2023.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and Arguments.

Call on : 17.08.2021

Prl. Civil Judge & JMFC.
Karkala